

ಅದನ್ನು ಅಲಂಕರಿಸಿದ್ದಳು. ನಡುಮನೆಯಲ್ಲಿ ಸತ್ಯನಾರಾಯಣ ಸ್ವಾಮಿಯ ಪೂಜೆ ನಡೀತಾ ಇದ್ದಾಗ ಲಿವಿಂಗ್ ರೂಮಿನ ಸೋಫಾದ ಮೇಲೆ ಕೂತಿದ್ದ ಗೀತಾ ಮತ್ತು ಅವಳ ಗೆಳತಿಯರೊಂದಿಗೆ ನಾನೂ ಕೂತಿದ್ದೆ. ಅವರೆಲ್ಲಾ ರಿಯಲ್ ಎಸ್ಟೇಟ್, ಸ್ಟಾಕ್ ಮಾರ್ಕೆಟ್, ಲೇ ಆಫ್, ಇಂಡಿಯಾದಿಂದ ಕೊಂಡು ತರಬೇಕಾದ ವಸ್ತು, ಹೈದರಾಬಾದಿನಲ್ಲಿ ಎನ್ನಾರೈಗಳಿಗಾಗಿ ತೆರೆದ ಅಂಗಡಿ, ಮಕ್ಕಳಿಗೆ ಕಲಿಸಬೇಕಾದ ಭಾರತೀಯ ಕಲೆಗಳು – ಇತ್ಯಾದಿ ಇತ್ಯಾದಿ ಮಾತನಾಡ್ತಾ ಇದ್ದರೆ ಕೇಳಿಸಿಕೊಳ್ತಾ ಇದ್ದೆ. ತಮ್ಮ ಹೆಣ್ಣು ಮಕ್ಕಳನ್ನು ಅಮೆರಿಕ ಗಂಡಿಗೆ ಕೊಟ್ಟು ಹಾಯಾಗಿದ್ದು, ಈಗ ಹೆರಿಗೆ ಮಾಡಿಸಲು ಬಂದ ಅಮ್ಮಂದಿರು, ಹುಟ್ಟಿದ ಕೂಸುಗಳಿಗೆ 'ಬೇಬಿ ಸಿಟ್ಟಿಂಗ್' ಮಾಡಿಕೊಡಲು ಬಂದ ಅಮ್ಮಂದಿರು ಕೆಲವರು ಅಲ್ಲಿದ್ದರು. ಪಿಯುಸಿಗೆ ಬಂದ ಮೇಲೆ ಹುಡುಗಿಯರ ಕನಸಲ್ಲಿ ಪಿಟ್ಸ್‌ಬರ್ಗಿನ ತಿಮ್ಮಪ್ಪ, ನಯಾಗರಾ ಜಲಪಾತ ಬರುತ್ತವಂತೆ!

ಹೌದೂ...ಎಲ್ಲಿ ಶ್ರೀವಿದ್ಯಾ? ಕಾಣಲೇ ಇಲ್ಲವಲ್ಲ? ಶ್ರೀನಿವಾಸನನ್ನು ಹುಡುಕುತ್ತಾ ಅದೆಲ್ಲಿಗೆ ಹೋದಳೋ! ಪಾಪ ಪೂರ್ ಗಾಲ್.

* * *

ನಾನು ಇಲ್ಲೇ ಇದೀನಿ. ಶ್ರೀನಿವಾಸನ ಬಗ್ಗೆ ಇನ್ನು ತಲೆ ಕೆಡಿಸಿಕೊಳ್ಳುವ ಅಗತ್ಯವಿಲ್ಲ! ನನ್ನ ನೌಕರಿ ಹೋದ ಮೇಲೆ ಆತ ನನ್ನನ್ನು ಕಣ್ಣೆತ್ತಿಯೂ ನೋಡಲಿಲ್ಲ! ಮೇಲಾಗಿ ಗ್ರೀನ್ ಕಾರ್ಡ್ ಬಂದ ಮೇಲೆ ಕೇಳಬೇಕೇ?